ಮಾನಸಿಕ, ದೈಹಿಕ ಹಿಂಸೆ ನೀಡುವ ಕಾರ್ಯವನ್ನು ಕೈಗೊಂಡಿದ್ದ.

ಸಂಕಪ್ಪ ಒಬ್ಬ ಅಜೀವ ಹೃದಯ ರೋಗಿ ಅಂದು, ಆತನಗಿರುವ ಎರಡು ಎಕರೆ ಹೊಲದಲ್ಲಿ ಒಂದು ಎಕರೆ ಮಾರಿ ತನ್ನ ಮದುವೆ ಮಾಡಿದ್ದಾನೆಂದು, ಉಳಿದ ಆ ಒಂದು ಎಕರೆ ತನ್ನ ತಮ್ಮ ಮಂಜನಿಗೆ, ತಾಯಿ ರುಕ್ಮವ್ವಳಿಗೆ ಮೀಸಲೆಂದು, ಈ ಕಾರಣದಿಂದಾಗಿ ತನ್ನ ಮನೆಯವರಿಂದ ಬಿಡಿಗಾಸೂ ಸಿಕ್ಕುವುದಿಲ್ಲವೆಂದು ಯಶೋದಾ, ಸತೀಶನಿಗೆ ಕಡ್ಡಿಮುರಿದಂತೆ ಕಡಾಮುಡಿ ಮಾತಾಡಿದ್ದಳು. ಅಲ್ಲಿಂದಲೇ ಅವರಿಬ್ಬರ ವೈವಾಹಿಕ ಸಂಬಂಧದ ಅಡ್ಡಗೋಡೆಗೆ ಅಡಿಗಲ್ಲು ಸ್ಥಾಪನೆಯಾಗಿತ್ತು. ಯಶೋದಾ ಇದನ್ನೇ ರುಕ್ಮವ್ವ, ಸಂಕಪ್ಪನ ಮುಂದೆ ಅಮೂಲಾಗ್ರವಾಗಿ ಹೇಳಿ ಬಿಕ್ಕಿದ್ದಳು.

ಖುದ್ದು ಮಗಳ ಬಾಯಾರೇ ಸತೀಶನ ಭಾನಗಡಿ ತಿಳಿದು ಅವನನ್ನ ಬೈದೋ.. ರಮಿಸಿಯೋ.. ಮಗಳ ಬಾಳೆವು ಸುದ್ದು ಮಾಡಬೇಕೆಂದು ಆ ದಿಶೆಯಲ್ಲಿ ಸಂಕಪ್ಪ ಯೋಚಿಸಲಿಲ್ಲ. ಅಥವಾ 'ಕೊಟ್ಟ ಹೆಣ್ಣು ಕುಲಕ್ಕೆ ಹೊರತು' ಎನ್ನುವಂತೆ ಯಶೋದಾಳನ್ನೂ ಗಂಡನ ಮನೆಗೆ ಹೋಗಿ ಅಟ್ಟ ಬರಲಿಲ್ಲ. ತನಗೆ ನೀಗುವಷ್ಟು ಯಶೋದಾಳನ್ನ, ಮಂಜನನ್ನ ಚೆನ್ನಾಗಿ ನೋಡಿಕೊಳ್ಳುತ್ತಾ ತಾನಾಯ್ತು, ತನ್ನ ಜೀವ್ನಾ ಆಯ್ತು ಅಂತ ತಣ್ಣಗಿದ್ದು ಬಿಟ್ಟ. ಆದರೆ ಸತೀಶ ತನ್ನ ಪ್ರಯತ್ನ ಮಾತ್ರ ಬಿಟ್ಟಿರಲಿಲ್ಲ. ಆಗಾಗ ಯಶೋದಾಳ ಹತ್ತಿರ ಬರುವುದು, ಕಾಟಾಚಾರ ಕೊಡುವುದು ನಡೆಸಿಯೇ ಇದ್ದ. ಇತ್ತೀಚೆಗಷ್ಟೇ ತನ್ನ ಅಕೌಂಟ್‌ನ ನಾಮಿನಿಯನ್ನಾಗಿ ಹೆಂಡತಿಯ ಹೆಸರು ಸೇರಿಸಬೇಕೆಂದು ಬಂದಿದ್ದ. ಯಾವುದ್ಯಾವುದೋ ಒಂದಷ್ಟು ಕಾಗದಗಳ ಮೇಲೆ ಆಕೆಯ ಸಹಿ ಪಡೆದು ಹೋಗಿದ್ದ. ಇದಾದ ನಂತರ ತಿಂಗಳು ಕಳೆದರೂ ಪುನಃ ಕಳಸಾಪುರಕ್ಕೆ ಕಾಲಿಟ್ಟಿರಲಿಲ್ಲ. ಹಾಗಂತ ಆಕೆಯೊಂದಿಗೆ ಫೋನಿನಲ್ಲಿ ತನ್ನ ಕೆತ್ತೆಭಜಿತನವನ್ನ ಮಾಡುವುದು ನಿಲ್ಲಿಸಿರಲಿಲ್ಲ.

ಯಶೋದಾ ಬಹಳಷ್ಟು ದಿನಗಳವರೆಗೆ ತವರು ಮನೆಯಲ್ಲಿಯೇ ಉಳಿದಿದ್ದರಿಂದ ನೆರೆಹೊರೆಯವರೆಲ್ಲಾ ಏನೇನೋ ಅಂದು ಆಡಿಕೊಳ್ಳತೊಡಗಿದರು. ಯಶೋದಾ ಯಾವತ್ತೂ ಇಂಥದ್ದಕ್ಕೆಲ್ಲಾ ಸೊಪ್ಪು ಹಾಕುವ ಜಾಯಮಾನದವಳಲ್ಲ. ರುಕ್ಮವ್ವ ಮಾತ್ರ ಇಂಥದ್ದಕ್ಕೆಲ್ಲಾ ಆಳಾಗುತ್ತಿರಲಿಲ್ಲ. ಹೀಗಿರುವಾಗಲೇ ಯಶೋದಾ ಒಮ್ಮೆ ತಲೆಸುತ್ತು, ವಾಕರಿಕೆ ಅಂತ ದವಾಖಾನೆಗೆ ಹೋಗಿ ತಾನು ಬಸುರಿ ಎಂಬ ಸುದ್ದಿಯನ್ನ ತಂದಿದ್ದಳು! ರುಕ್ಮವ್ವ ಮಗಳು ಬಸುರಿ ಎಂದು ಖುಷಿ ಪಟ್ಟಿದ್ದಕ್ಕಿಂತ ಆಡಿಕೊಳ್ಳುವ ಜನರ ಬಾಯಿ ಮುಚ್ಚಿಸಲು ಒಳ್ಳೇ ದಾರಿಯಾಯಿತೆಂದೇ ನಿಟ್ಟುಸಿರು ಬಿಟ್ಟಿದ್ದು ಹೆಚ್ಚು. ಹೀಗೆ ಯಶೋದಾಳ ಕೌಟುಂಬಿಕ ಜೀವನ ಎಲ್ಲ ರೀತಿಯಿಂದಲೂ ಚೆನ್ನಾಗಿ ಸಾಗ್ತಿದೆ ಎಂದುಕೊಳ್ಳುವಾಗಲೇ ಒಂದಿನ ಕತ್ತಲು ಮುತ್ತಿಕ್ಕುವ ಹೊತ್ತಿಗೆ ಏಕಾಏಕಿ ಕ್ರಿಮಿನಾಶಕ ಔಷಧಿ ಸೇವಿಸಿ ದೊಡ್ಡ ಅನಾಹುತವನ್ನೇ ಮಾಡಿಕೊಂಡಿದ್ದಳು. ಆಕೆ ಆತ್ಮಹತ್ಯೆ ಮಾಡಿಕೊಂಡಿದ್ದರ ಸುದ್ದಿ ಇಡೀ ಕಳಸಾಪುರಕ್ಕೇ ಅಜೀಬು ಹುಟ್ಟಿಸಿತ್ತು. ಆತ್ಮಹತ್ಯೆಗೆ ಕಾರಣವಂತೂ ಯಶೋದಾಳಿಗೆ ಹೊರತುಪಡಿಸಿ ಎಲ್ಲರಿಗೂ ಚಿದಂಬರ ರಹಸ್ಯವಾಗಿಯೇ ಉಳಿದು ಬಿಟ್ಟಿತ್ತು.

* * *

ಬಸ್ಸು ಹಾವೇರಿ ಮುಟ್ಟುವುದಕ್ಕೂ ಕಳಸಪ್ಪ ನಿದ್ದೆಯಿಂದ ಎಚ್ಚೆತ್ತು ಕಣ್ತೆರೆವುದಕ್ಕೂ ಸರಿ ಹೋಯಿತು. ಬಸ್ಸು ನಿಲ್ದಾಣ ತಲುಪಿ ನಿಲ್ಲುವ ಮುಂಚೆ ಕಳಸಪ್ಪ ಬಸ್ಸಿನಿಂದ ಟಣ್ಣನೇ ಜಿಗಿದ. ಅದೇ ಅವಸರದಲ್ಲಿ ಹಾವೇರಿಯಿಂದ ತನ್ನೂರು ಕಳಸಾಪುರಕ್ಕೆ ಹೊರಡಲು ನಿಲ್ಲುವ ಟಮ್‌ಟಮ್ ಸ್ಟ್ಯಾಂಡಿಗೆ ಬಂದ. ಅವನು ಅಲ್ಲಿ ನಿಲ್ಲುವ ಪುರುಸೊತ್ತಿಲ್ಲದೇ ಆ ಊರಿನ ಸಹ ಪ್ರಯಾಣಿಕರು 'ಹ್ಯಾಂಗೈತೆಪಾ ಹುಡುಗಿಗೆ?', 'ಆರಾಮ ಆದಾಳಿಲ್ಲೋ?' ಅಂತ ವಿಚಾರಿಸುತ್ತಲೇ ಬರ ಮಾಡಿಕೊಂಡರು.

'ಯಶೋದಿ ಹಿಂಗ ದುಡುಕಬಾರ್ದಿತ್ತು', 'ಅಡ್ನಾಡಿ ಹೆಣ್ಣ ಭಾಳ ಅಧ್ವಾನ್ ಮಾಡಿಯಿಟ್ಲ' 'ಹೊಟ್ಯಾಗ ಕೂಸು ಇಟಗೊಂಡ ಹಿಂಗ್ ಮಾಡ್ಕೊಳ್ಳೂದಾ ಧೌಳಾಕಿ' ಅಂತ ಮೊದಲಿಗೆ ಅವಳನ್ನ ವಿಧವಿಧವಾಗಿ ಬೈಯ್ದ ಜನ 'ಸಂಕಪ್ಪನ್ ದೈವ ಸುಮಾರೈತಿ', 'ಅಷ್ಟೆಲ್ಲಾ ಕರ್ಚು ಮಾಡಿ ಲಗ್ನ ಮಾಡಿದ್ದ ಅಂವ್ನ ಕೈ ಕೆಟ್ಟೈತಿ', 'ನಶೀಬ ಕೊಟ್ಟ ಐತಿ'